# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:21-07-2022ರಂದು ಗುರುವಾರ ಅಪರಾಹ್ನ 4-00 ಘಂಟೆಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಪ್ರಸನ್ನಕುಮಾರ ಬ್ಲಾಕ್, ಬೆಂಗಳೂರು ನಗರ ವಿಶ್ವವಿದ್ಯಾಲಯ ಆವರಣ, ವೈ. ರಾಮಚಂದ್ರ ರಸ್ತೆ, ಗಾಂಧಿನಗರ, ಬೆಂಗಳೂರು - ಈ ಸಭಾಂಗಣದಲ್ಲಿ ನಡೆದ 2022-23ರ ಹಣಕಾಸು ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳು.

| ಹಾಜರಾದ ಸದಸ್ಯರು: | | ಪದನಾಮ |
|---|---|---|
| 01. | ಪ್ರೊ. ಬಿ.ಪಿ. ವೀರಭದ್ರಪ್ಪ<br>ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 02. | ಶ್ರೀಮತಿ ಉಮಾ. ಕೆ<br>ಉಪ ಕಾರ್ಯದರ್ಶಿಗಳು<br>ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ,<br>ವಿಧಾನಸೌಧ, ಬೆಂಗಳೂರು | ಸದಸ್ಯರು |
| 03. | ಶ್ರೀ ಎಂ.ಜಿ. ವೆಂಕಟೇಶಯ್ಯ<br>ಉಪಕಾರ್ಯದರ್ಶಿಗಳು (ಉನ್ನತ ಶಿಕ್ಷಣ)<br>ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 04. | ಶ್ರೀ ಗುರುರಾಜ್ ರಾವ್<br>ಹಿರಿಯ ನಿರ್ದೇಶಕರು ಹಾಗೂ<br>ಪದನಿಮಿತ್ತ ಜಂಟಿ ಕಾರ್ಯದರ್ಶಿ<br>ಯೋಜನಾ ಇಲಾಖೆ<br>ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 05. | ಶ್ರೀ ಜಿ. ಧರ್ಮಪ್ರಸಾದ್<br>ಸಿಂಡಿಕೇಟ್ ಸದಸ್ಯರು | ಸದಸ್ಯರು |
| 06. | ಶ್ರೀ ಕುಮಾರೇಗೌಡ<br>ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು | ಸದಸ್ಯರು |
| 07. | ಶ್ರೀಮತಿ ಅನುರಾಧ. ಜಿ. ಕ.ಆ.ಎಸ್. (ಹಿರಿಯ ಶ್ರೇಣಿ)<br>ಕುಲಸಚಿವರು | ಸದಸ್ಯರು. |
| 08. | ಪ್ರೊ. ಎಸ್.ಕೆ. ನವೀನ್‌ಕುಮಾರ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 09. | ಶ್ರೀ ಎಸ್. ರಾಮಕೃಷ್ಣ, ಕೆ.ಎಸ್.ಎ.ಎಸ್.<br>ಹಣಕಾಸು ಅಧಿಕಾರಿ | ಸದಸ್ಯ ಕಾರ್ಯದರ್ಶಿಗಳು |

ಪ್ರಸ್ತಾವನೆ:

ಪ್ರಾರಂಭದಲ್ಲಿ, ಹಣಕಾಸು ಅಧಿಕಾರಿಗಳು ಹಣಕಾಸು ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಗೆ ಆಗಮಿಸಿದ ನೂತನ ಸದಸ್ಯರಾದ ಶ್ರೀ ಕುಮಾರೇಗೌಡ, ವಿದ್ಯಾವಿಷಯಕ ಪರಿಷತ್ತಿನ ಸದಸ್ಯರನ್ನು ಸಭೆಗೆ ಪರಿಚಯಿಸಿ, ಸದಸ್ಯರುಗಳಿಗೆ ಆತ್ಮೀಯವಾಗಿ ಸ್ವಾಗತ ಕೋರಿದರು.

ಸಭೆಯ ಅಧ್ಯಕ್ಷರು ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ, ಸುಮಾರು 15-20 ವರ್ಷಗಳಿಂದ ಒಂದೇ ಹುದ್ದೆಯಲ್ಲಿ ಬಹಳಷ್ಟು ಅಧ್ಯಾಪಕೇತರ ನೌಕರರು ಕೆಲಸ ನಿರ್ವಹಿಸುತ್ತಿದ್ದಾರೆ. ಅವರು ಬಡ್ತಿಯಿಂದ ವಂಚಿತರಾಗಿದ್ದಾರೆ, ಆದುದರಿಂದ, ಈ ಪರಿನಿಯಮಗಳಿಗೆ ಅನುಮೋದನೆಯನ್ನು ನೀಡಬೇಕೆಂದು ಕೋರಿದರು. ನಂತರ ಸಭಾ ಕಾರ್ಯಸೂಚಿಯಂತೆ ವಿಷಯಗಳನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

| | |
|---|---|
| 2022-ಹಸ:1:01: | **ದಿನಾಂಕ:22-03-2022ರಂದು ನಡೆದ 2021-22ನೇ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ದೃಢೀಕರಣ.** |
| ನಿರ್ಣಯ: | ದಿನಾಂಕ:22-03-2022ರಂದು ನಡೆದ ಕುವೆಂಪು ವಿಶ್ವವಿದ್ಯಾಲಯದ 2021-22ನೇ ಸಾಲಿನ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ದೃಢೀಕರಿಸಿತು. ನಂತರ ಹಣಕಾಸು ಅಧಿಕಾರಿಗಳು 2022-23ನೇ ಆರ್ಥಿಕ ವರ್ಷದ ಆಯ-ವ್ಯಯದಲ್ಲಿ ಸ್ವೀಕೃತಿ ರೂ.13097.50 ಲಕ್ಷಗಳು ಮತ್ತು ವೆಚ್ಚಗಳು ರೂ.13883.19 ಲಕ್ಷಗಳು ಹಾಗೂ ರೂ.785.69 ಲಕ್ಷಗಳ ಕೊರತೆ ಅಂಶವನ್ನು ಮತ್ತೊಮ್ಮೆ ಸಭೆಯ ಅವಗಾಹನೆಗೆ ತಂದರು. |
| 2022-ಹಸ:1:02: | **ದಿನಾಂಕ:22-03-2021ರಂದು ನಡೆದ 2021-22ನೇ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.** |
| ನಿರ್ಣಯ: | ದಿನಾಂಕ:22-03-2022ರಂದು ನಡೆದ ಕುವೆಂಪು ವಿಶ್ವವಿದ್ಯಾಲಯದ 2021-22ನೇ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ಪಾಲನಾ ವರದಿಯನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು. |
| 2022-ಹಸ:1:03: | STATUTES GOVERNING THE UP-GRADATION AND REORGANIZATION OF THE SANCTIONED MINISTERIAL AND GROUP-D POSTS IN THE KUVEMPU UNIVERSITY **ಪರಿನಿಯಮದ ಅನುಮೋದನೆ ಕುರಿತು.** |
| ಚರ್ಚೆ: | STATUTES GOVERNING THE UP-GRADATION AND REORGANIZATION OF THE SANCTIONED MINISTERIAL AND GROUP-D POSTS IN THE KUVEMPU UNIVERSITY ಪರಿನಿಯಮವನ್ನು ಮಾನ್ಯ ಕುಲಸಚಿವರು ಅನುಮೋದನೆಗಾಗಿ ಮಂಡಿಸಿದರು. |

ಈ ಪರಿನಿಯಮವನ್ನು 2012 ಮತ್ತು 2014ನೇ ಇಸವಿಯಲ್ಲಿಯೇ ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಿದ್ದು, ನಂತರ ಇದರ ಬಗ್ಗೆ ಸರ್ಕಾರದೊಂದಿಗೆ ಪತ್ರಿಸಲಾಗಿರುವ ಪತ್ರಗಳನ್ನು ಹಾಗೂ ವಿಶ್ವವಿದ್ಯಾಲಯ ನೀಡಿರುವ ಮಾಹಿತಿಗಳನ್ನು ಕ್ರೋಢೀಕರಿಸಿದ ಮಾಹಿತಿಯನ್ನು ಸಭೆಯ ಗಮನಕ್ಕೆ ತರಲಾಯಿತು.

ಸರ್ಕಾರಕ್ಕೆ ಹೆಚ್.ಆರ್.ಎಂ.ಎಸ್. ನಲ್ಲಿ ವೇತನ ಸೆಳೆಯಲು ಅಧ್ಯಾಪಕ ಮತ್ತು ಅಧ್ಯಾಪಕೇತರ ನೌಕರರಿಗೆ ವೇತನ ಹುಂಡಿಗೆ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಶಿವಮೊಗ್ಗ ಮೇಲುಸಹಿ ಮಾಡುವ ಸಂದರ್ಭದಲ್ಲಿ, ಮಂಜೂರಾಗಿರುವ ಹುದ್ದೆಗಳ ಅನುಗುಣವಾಗಿ ಮಾತ್ರ ಸಂಬಳವನ್ನು ಸೆಳೆಯಲು ಪತ್ರಿಸಿರುವುದರಿಂದ ಉನ್ನತೀಕರಣ ಮಾಡಿರುವ ಹುದ್ದೆಗಳಿಗೆ ಮುಂಬಡ್ತಿ ನೀಡಿರುವ ಬಗ್ಗೆ ಪತ್ರಿಸಿರುತ್ತಾರೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತರಲಾಯಿತು.

ನಂತರ ನೌಕರರ ವೇತನದ ಬಿಲ್ಲನ್ನು ತಡೆಹಿಡಿಯಬಾರದೆಂದು ಸರ್ಕಾರದಿಂದ ಬಂದಿರುವ ಪತ್ರದ ಮೇರೆಗೆ, ಕುಲಸಚಿವರು ಮಾನ್ಯ ಕುಲಪತಿಗಳ ಆದೇಶದಂತೆ ಸಕ್ಷಮ ಪ್ರಾಧಿಕಾರಗಳಿಗೆ ಪರಿನಿಯಮವನ್ನು ಮಂಡಿಸಿ ಸರ್ಕಾರಕ್ಕೆ ಕಳುಹಿಸಲಾಗುವುದು ಎಂದು ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಶಿವಮೊಗ್ಗ ಇವರಿಗೆ ತಿಳಿಸಿರುವ ವಿಷಯವನ್ನು ಸಭೆಯ ಅವಗಾಹನೆಗೆ ತರಲಾಯಿತು.

ಮಾನ್ಯ ಕುಲಪತಿಗಳು ಮಾತನಾಡುತ್ತಾ, 2012ನೇ ಸಾಲಿನಿಂದ ಇಲ್ಲಿಯವರೆಗೆ ವಿವಿಧ ಹುದ್ದೆಗಳನ್ನು ಉನ್ನತೀಕರಣಗೊಳಿಸಿ, ಮುಂಬಡ್ತಿಯನ್ನು ನೀಡುತ್ತಾ ಬರಲಾಗಿದೆ. ಅಧ್ಯಾಪಕೇತರ ನೌಕರರು 10-15 ವರ್ಷಗಳಿಂದ ಒಂದೇ ಹುದ್ದೆಯಲ್ಲಿ ಕೆಲಸ ಮಾಡುತ್ತಿರುವುದರಿಂದ ಪರಿನಿಯಮವನ್ನು ಸಭೆಯ ಅನುಮೋದನೆಗೆ ಮಂಡಿಸಿದ್ದು, ಅನುಮೋದನೆ ನೀಡುವಂತೆ ಕೋರಿದರು.

ಸರ್ಕಾರದ ಪ್ರತಿನಿಧಿಗಳಾದ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರು ಮಾತಾನಾಡುತ್ತಾ, ಈಗಾಗಲೇ ಆಗಿರುವ ಉನ್ನತೀಕರಣ ಹುದ್ದೆಗಳಲ್ಲಿ ಪ್ರತಿ ಅಧ್ಯಾಪಕೇತರ ನೌಕರರರ ಉನ್ನತೀಕರಣ ಮಾಡಿದ ನಂತರ ವೇತನದಲ್ಲಿ ಎಷ್ಟು ಮೊತ್ತದ ವ್ಯತ್ಯಾಸ ಕಂಡು ಬಂದಿದೆ ಎಂಬ ವಿವರ ಮತ್ತು ಅವರು ಬಡ್ತಿ ಹೊಂದಿದ ದಿನಾಂಕಗಳ ವಿವರಗಳನ್ನು ಮಂಡಿಸಿ ವೃಂದವಾರು, ಹುದ್ದೆವಾರು ಮಾಹಿತಿಯನ್ನು ಹಾಗೂ ಸರ್ಕಾರದಿಂದ ಪರಿನಿಯಮ ಅನುಮೋದನೆಯಾದಲ್ಲಿ ಮಾತ್ರ ವೇತನ ನಿಗದೀಕರಣ ಮಾಡಲು ಸೂಚಿಸಿದರು ಮತ್ತು ಈಗಾಗಲೇ ರಚಿಸಿರುವ ಪರಿನಿಯಮದಲ್ಲಿ ಆಂತರಿಕ ಸಂಪನ್ಮೂಲಗಳಿಂದ ಭರಿಸಲು ಸಮಂಜಸವಾಗಿರುವುದಿಲ್ಲವೆಂದು ಸರ್ಕಾರದ ಪ್ರತಿನಿಧಿಗಳು ಸಲಹೆ ನೀಡಿದರು. ಈ ಕುರಿತು ಸಂಪೂರ್ಣ ಹಿನ್ನೆಲೆಯೊಂದಿಗೆ ಸರ್ಕಾರಕ್ಕೆ ಪತ್ರ ಬರೆಯಲು ಸೂಚಿಸಿತು.

| | |
|---|---|
| | ನಂತರ ಸಿಂಡಿಕೇಟ್ ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡುತ್ತಾ, ಪರಿನಿಯಮವು ಈಗಾಗಲೇ ವಿಶ್ವವಿದ್ಯಾಲಯದ ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಅನುಮೋದನೆಯಾಗಿರುವ ಹಿನ್ನೆಲೆಯಲ್ಲಿ, ಸದರಿ ಪರಿನಿಯಮವನ್ನು ಅನುಮೋದಿಸುವಂತೆ ಸಭೆಯನ್ನು ಕೋರಿದರು. |
| ನಿರ್ಣಯ: | ಸುಧೀರ್ಘವಾಗಿ ಚರ್ಚಿಸಿದ STATUTES GOVERNING THE UP-GRADATION AND REORGANIZATION OF THE SANCTIONED MINISTERIAL AND GROUP-D POSTS IN THE KUVEMPU UNIVERSITY ಪರಿನಿಯಮವನ್ನು ಸರ್ಕಾರದ ಅನುಮೋದನೆಗಾಗಿ ಕಳುಹಿಸಲು ನಿರ್ಣಯಿಸಿತು. |
| 2022-ಹಸ:1:04: | Statutes Relating to Upgradation of the post of Draftsman as Senior Draftsman Personal to the Incumbent Employee of Kuvempu University ಪರಿನಿಯಮದ ಅನುಮೋದನೆ ಕುರಿತು. |
| ಚರ್ಚೆ : | Statutes Relating to Upgradation of the post of Draftsman as Senior Draftsman Personal to the Incumbent Employee of Kuvempu University ಪರಿನಿಯಮವನ್ನು ಮಾನ್ಯ ಕುಲಸಚಿವರು ಸಭೆಯ ಅನುಮೋದನೆಗಾಗಿ ಮಂಡಿಸಿದರು. ಪರಿನಿಯಮಗಳಲ್ಲಿ ತೋರಿಸಲಾಗಿರುವ ಹುದ್ದೆಗಳು ಸರ್ಕಾರದಿಂದ ಮಂಜೂರಾದ ಹುದ್ದೆಗಳೇ ಎಂಬ ಪ್ರಶ್ನೆಗೆ ಈ ಕೆಳಗಿನಂತೆ ವಿವರ ನೀಡಲಾಯಿತು. 02 ಹುದ್ದೆಗಳಲ್ಲಿ ಒಂದು ಹುದ್ದೆಯನ್ನು ಜೂನಿಯರ್ ಇಂಜಿನಿಯರ್ ಹುದ್ದೆಗೆ ಈ ಹಿಂದೆ ಬಡ್ತಿ ನೀಡಲಾಗಿದೆ. ಇನ್ನೊಂದು ಹುದ್ದೆಯನ್ನು 371ಜೆ ಅಡಿ ನೇಮಕಮಾಡಿಕೊಳ್ಳಲಾಗಿದ್ದು, ಈ ಹುದ್ದೆಯನ್ನು ಉನ್ನತೀಕರಣಕ್ಕಾಗಿ ಮಂಡಿಸಲಾಗಿದೆ. ಎಂಬ ಬಗ್ಗೆ ಸಭೆಗೆ ಮಾಹಿತಿ ನೀಡಿದರು.<br>ಮುಂದುವರೆದು, ಖಾಲಿ ಇರುವ ಯಾವ ಹುದ್ದೆಗಳನ್ನು ಉನ್ನತೀಕರಿಸಲಾಗುತ್ತಿದೆ ಎಂಬ ಮಾಹಿತಿ ಹಾಗೂ ಹಾಲಿ ನಿರ್ವಹಿಸಲಾಗುತ್ತಿರುವ ಹುದ್ದೆಗಳ ಅವಶ್ಯಕತೆ ಇಲ್ಲವೆ? ಎಂಬ ಮಾಹಿತಿಯನ್ನು ಕೂಡ ಕೋರಿದರು. ಕುಲಸಚಿವರು ಮಾತನಾಡಿ, ನೌಕರರು ಹಲವು ವರ್ಷಗಳಿಂದ ಒಂದೇ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಸೀನಿಯರ್ ಡ್ರಾಫ್ಟ್ಸ್‌ಮ್ಯಾನ್ ಹುದ್ದೆಗೆ ಉನ್ನತೀಕರಿಸಲು ಕೋರಿದರು. ನಂತರ ಸರ್ಕಾರದ ಪ್ರತಿನಿಧಿಗಳು ಇದನ್ನು One Time Measure ಎಂದು ಉನ್ನತೀಕರಣಗೊಳಿಸಿದಲ್ಲಿ, ಸದರಿ ಹುದ್ದೆಯಿಂದ ನಿವೃತ್ತಿಗೊಂಡ ನಂತರ ಉನ್ನತೀಕರಣಗೊಂಡ ಈ ಹುದ್ದೆಯು ಸ್ವಯಂಚಾಲಿತವಾಗಿ ರದ್ದುಗೊಳ್ಳುತ್ತದೆಂದು ಸಭೆಯ ಗಮನಕ್ಕೆ ತಂದರು. |

| | |
|---|---|
| ನಿರ್ಣಯ: | ಚರ್ಚೆಯ ನಂತರ ಸಭೆಯು Statutes Relating to Upgradation of the post of Draftsman as Senior Draftsman Personal to the Incumbent Employee of Kuvempu University. ಪರಿನಿಯಮವನ್ನು ಅನುಮೋದಿಸಿತು. ಮುಂದುವರೆದು, ಪರಿನಿಯಮವನ್ನು ವಿಶ್ವವಿದ್ಯಾಲಯದ ಸಕ್ಷಮ ಪ್ರಾಧಿಕಾರಗಳ ಅನುಮೋದನೆಯನ್ನು ಪಡೆದುಕೊಂಡು ಸರ್ಕಾರಕ್ಕೆ ಕಳುಹಿಸಬೇಕೆಂದು ಮತ್ತು ಇದು ತಾಂತ್ರಿಕ ಹುದ್ದೆಯಾಗಿರುವುದರಿಂದ ಪರಿನಿಯಮವು ಸರ್ಕಾರದಿಂದ ಅನುಮೋದನೆಯಾಗಿ ಬಂದ ನಂತರವೇ ಜಾರಿಗೆ ತರಬೇಕೆಂದು ಸಭೆಯು ನಿರ್ಣಯಿಸಿತು. |
| 2022-ಹಸ:1:05 | **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು :** |
| 2022-ಹಸ:3:05(1) | **STATUTE RELATING TO UPGRADATION OF TWO JUNIOR COMPUTER PROGRAMMER POSTS PERSONAL TO THE INCUMBENT EMPLOYEES OF KUVEMPU UNIVERSITY 2020 ಪರಿನಿಯಮದ ಅನುಮೋದನೆ ಕುರಿತು.** |
| ಚರ್ಚೆ: | STATUTE RELATING TO UPGRADATION OF TWO JUNIOR COMPUTER PROGRAMMER POSTS PERSONAL TO THE INCUMBENT EMPLOYEES OF KUVEMPU UNIVERSITY 2020 ಪರಿನಿಯಮವನ್ನು ಮಾನ್ಯ ಕುಲಸಚಿವರು ಅನುಮೋದನೆಗಾಗಿ ಸಭೆಗೆ ಮಂಡಿಸಿದರು. ಸರ್ಕಾರದ ಪ್ರತಿನಿಧಿಗಳು ಪರಿನಿಯಮಗಳಲ್ಲಿ ತೋರಿಸಲಾಗಿರುವ ಹುದ್ದೆಗಳು ಸರ್ಕಾರದಿಂದ ಮಂಜೂರಾದ ಹುದ್ದೆಗಳೇ ಎಂಬ ಬಗ್ಗೆ ಸ್ಪಷ್ಟ ಮಾಹಿತಿ ನೀಡುವಂತೆ ಕೇಳಿದರು. ಮುಂದುವರೆದು, ಖಾಲಿ ಇರುವ ಯಾವ ಹುದ್ದೆಗಳನ್ನು ಉನ್ನತೀಕರಿಸಲಾಗುತ್ತಿದೆ ಎಂಬ ಮಾಹಿತಿ ಹಾಗೂ ಹಾಲಿ ನಿರ್ವಹಿಸಲಾಗುತ್ತಿರುವ ಹುದ್ದೆಗಳ ಅವಶ್ಯಕತೆ ಇಲ್ಲವೇ ಎಂಬ ಮಾಹಿತಿಯನ್ನು ಕೂಡ ಕೋರಿದರು. ಕುಲಸಚಿವರು ಮಾತನಾಡಿ, ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್ ಹುದ್ದೆಯಲ್ಲಿರುವ ನೌಕರರು ಹಲವು ವರ್ಷಗಳಿಂದ ಒಂದೇ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ System Analyst and Senior Programmer ಹುದ್ದೆಗೆ ಉನ್ನತೀಕರಿಸಲು ಕೋರಿದರು ಮತ್ತು ನಂತರ ಸರ್ಕಾರದ ಪ್ರತಿನಿಧಿಗಳು ಇದನ್ನು One Time Measure ಉನ್ನತೀಕರಣಗೊಳಿಸಿದಲ್ಲಿ, ಸದರಿ ಹುದ್ದೆಯಿಂದ ನಿವೃತ್ತಿಗೊಂಡ ನಂತರ ಉನ್ನತೀಕರಣಗೊಂಡ ಈ ಹುದ್ದೆಯು ಸ್ವಯಂಚಾಲಿತವಾಗಿ ರದ್ದುಗೊಳ್ಳುತ್ತದೆಂದು ಸಭೆಯ ಗಮನಕ್ಕೆ ತಂದರು. |
| ನಿರ್ಣಯ: | ಚರ್ಚೆಯ ನಂತರ ಸಭೆಯು STATUTE RELATING TO UPGRADATION OF TWO JUNIOR COMPUTER PROGRAMMER POSTS PERSONAL TO THE INCUMBENT EMPLOYEES OF KUVEMPU UNIVERSITY ಪರಿನಿಯಮವನ್ನು ವಿಶ್ವವಿದ್ಯಾಲಯದ ಸಕ್ಷಮ ಪ್ರಾಧಿಕಾರಗಳ ಅನುಮೋದನೆಯನ್ನು ಪಡೆದುಕೊಂಡು ಸರ್ಕಾರಕ್ಕೆ ಕಳುಹಿಸಬೇಕೆಂದು ಮತ್ತು ಇದು ತಾಂತ್ರಿಕ ಹುದ್ದೆಯಾಗಿರುವುದರಿಂದ ಪರಿನಿಯಮವು ಸರ್ಕಾರದಿಂದ ಅನುಮೋದನೆಯಾಗಿ ಬಂದ ನಂತರವೇ ಜಾರಿಗೆ ತರಬೇಕೆಂದು ಸಭೆಯು ನಿರ್ಣಯಿಸಿತು. |

| | |
|---|---|
| 2022-ಹಸ:1:05(2) | **SCHEME GOVERNING THE REGULARIZATION OF SERVICES OF THE DRIVERS WORKING IN KUVEMPU UNIVERSITY ON CONSOLIDATED PAYMENTS ಅನುಮೋದನೆ ಕುರಿತು** |
| ಚರ್ಚೆ: | SCHEME GOVERNING THE REGULARIZATION OF SERVICES OF THE DRIVERS WORKING IN KUVEMPU UNIVERSITY ON CONSOLIDATED PAYMENTS, ಅನುಮೋದನೆಗಾಗಿ ಮಾನ್ಯ ಕುಲಸಚಿವರು (ಪರೀಕ್ಷಾಂಗ) ಇವರು ಸಭೆಗೆ ಮಂಡಿಸಿ ಮಾತನಾಡುತ್ತಾ, ವಾಹನ ಚಾಲಕರ ಹುದ್ದೆಗೆ ವಾಹನ ಚಾಲಕರುಗಳು 20 ವರ್ಷಗಳಿಂದ ವಿಶ್ವವಿದ್ಯಾಲಯದಲ್ಲಿ ಹಂಗಾಮಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಇವರುಗಳನ್ನು ವಿಶ್ವವಿದ್ಯಾಲಯದ ಸೇವೆಯಲ್ಲಿ ವಿಲೀನೀಕರಣಗೊಳಿಸುವ ಪರಿನಿಯಮಕ್ಕೆ ಅನುಮೋದನೆ ನೀಡಬೇಕೆಂದು ಕೋರಿದರು.<br><br>ಈ ಬಗ್ಗೆ ಕುಲಸಚಿವರು(ಆಡಳಿತ) ಇವರಿಗೆ ಒಟ್ಟು ಹುದ್ದೆಯ ವಿವರ, ವೃಂದದ ಬಗ್ಗೆ ವಿವರಣೆ ಕೇಳಿದಾಗ, ಕುಲಸಚಿವರ(ಆಡಳಿತ) ಗಮನಕ್ಕೆ ಬಾರದೇ ಹೆಚ್ಚುವರಿ ಕಾರ್ಯಸೂಚಿ ಮಂಡಿಸಿರುವುದರಿಂದ ಹಾಗೂ Statute Committee ಯಿಂದ ಬಾರದೇ ಇರುವುದರಿಂದ, ವಿವರಗಳನ್ನು ನೀಡಲಾಗುವುದೆಂದು ಸಭೆಗೆ ತಿಳಿಸಿದರು ಹಾಗೂ ಈಗಾಗಲೇ ಆಡಿಟ್ ಅಕ್ಷೇಪಣೆಯಾಗಿರುವುದಾಗಿ ಸಭೆಗೆ ತಿಳಿಸಿದರು.<br><br>ಸರ್ಕಾರದ ಆರ್ಥಿಕ ಇಲಾಖೆ ಹಾಗೂ ಉನ್ನತ ಶಿಕ್ಷಣ ಇಲಾಖೆಯ ಉಪಕಾರ್ಯದರ್ಶಿಗಳು ಮಾತಾನಾಡುತ್ತಾ, ಪ್ರಸ್ತುತ ಚಾಲ್ತಿಯಲ್ಲಿರುವ ಸರ್ಕಾರದ ನಿಯಮದಂತೆ ವಾಹನ ಚಾಲಕರ ಹೊರಗುತ್ತಿಗೆ ತುಂಬಲು ಅವಕಾಶವಿರುವುದಾಗಿ ತಿಳಿಸಿದರು ಹಾಗೂ ಹುದ್ದೆಗಳಲ್ಲಿ ರೋಸ್ಟರ್ ಹಾಗೂ ನೇಮಕಾತಿ ನಿಯಮಗಳನ್ನು ಪಾಲಿಸಬೇಕೆಂದು ತಿಳಿಸಿದರು. |
| ನಿರ್ಣಯ: | ಸುಧೀರ್ಘವಾಗಿ ಚರ್ಚೆಯ ನಂತರ SCHEME GOVERNING THE REGULARIZATION OF SERVICES OF THE DRIVERS WORKING IN KUVEMPU UNIVERSITY ON CONSOLIDATED PAYMENTS. ಪ್ರಸ್ತಾಪಿತ ವಾಹನ ಚಾಲಕರ ಒಟ್ಟು ಮಂಜೂರಾದ ಹುದ್ದೆ, ಹಾಲಿ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ ಎಷ್ಟು ವರ್ಷಗಳಿಂದ ಸೇವೆಯಲ್ಲಿದ್ದರು, ಸೇವೆಗೆ ಸೇರಿರುವ ದಿನಾಂಕವನ್ನು ನಮೂದಿಸಿ, ವಿಶ್ವವಿದ್ಯಾಲಯದ ಸಕ್ಷಮ ಪ್ರಾಧಿಕಾರಗಳ ಅನುಮೋದನೆಯನ್ನು ಪಡೆದುಕೊಂಡು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ಸಭೆಯು ನಿರ್ಣಯಿಸಿತು. |

ಅಂತಿಮವಾಗಿ, ಸಭೆಗೆ ಆಗಮಿಸಿ ತಮ್ಮ ಅತ್ಯಮೂಲ್ಯ ಸಲಹೆ/ ಸಹಕಾರಗಳನ್ನು ನೀಡಿದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ಹಣಕಾಸು ಅಧಿಕಾರಿಗಳು ವಂದಿಸಿದ ನಂತರ ಸಭೆಯು ಮುಕ್ತಾಯಗೊಂಡಿತು.

ಸಹಿ/-

(ಎಸ್. ರಾಮಕೃಷ್ಣ, ಕ.ಎಸ್.ಪಿ.ಎಸ್.)
ಹಣಕಾಸು ಅಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿಗಳು

(ಪ್ರೊ. ಬಿ.ಪಿ. ವೀರಭದ್ರಪ್ಪ)
ಕುಲಪತಿಗಳು ಹಾಗೂ ಅಧ್ಯಕ್ಷರು